ಸಾಕ್ಷಿಯನ್ನು ದಿಃ 08.07.2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ </u>ಶ್ರೀ ವಿ.ಎಸ್.ಪಿ. ಪ್ರತಿವಾದಿ ಪರ ವಕೀಲರಿಂದ

ನನ್ನ ಊರು ವಡವಿ ಇರುತ್ತದೆ. ವಡವಿಯಲ್ಲಿ ನಮ್ಮ ಪಿತ್ರಾರ್ಜಿತ ಆಸ್ತಿಗಳು ಇರುತ್ತದೆ. ನಮ್ಮ ಪಿತ್ರಾರ್ಜಿ ಆಸ್ತಿಗಳ ಸರ್ವೆ ನಂ. 26/1 ನಂಬರ ಇರುತ್ತವೆ. ದಾವಾ ಆಸ್ತಿಗಳು ನನ್ನ ಮುತ್ತಜ್ಜನಾದ ಸೊರಬಪ್ಪನಿಂದ ಬಂದಿರುತ್ತವೆ ಹಾಗೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದೆನೆಂದರೆ ಸರಿಯಲ್ಲ. ಸರ್ವೆ ನಂ.26/2 ಬಿ ನಮ್ಮ ಆಸ್ತಿಯಾಗಿರುತ್ತದೆ. ಸದರಿ ಜಮೀನಿನಲ್ಲಿ ಪಹಣಿ ಪತ್ರಿಕೆಯ ಪ್ರಕಾರ 7 ಜನರ ಹೆಸರುಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಪಹಣಿ ಪತ್ರಿಕೆಯಲ್ಲಿರುವ 7 ಜನರ ಹೆಸರುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ. ಈ ದಾವಾದಲ್ಲಿ ಸರ್ವೆ ನಂ. 26/2 ಬಿ ಸ್ವತ್ತನ್ನು ಸೇರಿಸಿದಿರುವುದಿಲ್ಲ ಹಾಗೂ ಅದರಲ್ಲಿ ಪಹಣಿ ಪತ್ರಿಕೆಯಲ್ಲಿರುವ ಹೆಸರಗಳನ್ನು ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೇ ನಂ. 26/2 ಬಿ ಒಂದೇ ನಮ್ಮ ಮೂಲ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ.

2.ಬಸಪ್ಪನಿಗೆ ಇಬ್ಬರೂ ಹೆಣ್ಣು ಮಕ್ಕಳು ಇದ್ದರು. ಬಸಪ್ಪನಿಗೆ ಗುರುಪಾದಪ್ಪ, ಸಾವತ್ರವ್ವ ಸೊರಬಪ್ಪ ಎಂಬ ಮಕ್ಕಳು ಇದ್ದರು ಎಂದರೆ ಸರಿಯಲ್ಲ. ಗುರುಪಾದಪ್ಪನಿಗೆ ಚಂದ್ರವ್ವ ಒಬ್ಬ ಹೆಣ್ಣು ಮಗಳು ಇರುತ್ತಾಳೆ. ಗುರುಪಾದಪ್ಪನಿಗೆ ಚಂದ್ರವ್ವ ಎಂಬ ಮಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಗುರುಪಾದಪ್ಪನಿಗೆ ಚನ್ನವೀರವ್ವ ಎಂಬ ಮಗಳು ಇದ್ದು ಅವಳು ಚಿಕ್ಕ ವಯಸ್ಸಿ ನಲ್ಲಿ ಮೃತಪಟ್ಟಿರುತ್ತಾಳೆಂದರೆ ಸರಿಯಲ್ಲ. ಗುರುಪಾದಪ್ಪನಿಗೆ ಯಾರು ವಂಶಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ಸಾವತ್ರವ್ವನಿಗೆ ಮಹಾದೇವಪ್ಪ ಎಂಬ ಮಗನಿದ್ದ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯು ಮಹಾದೇವಪ್ಪನ ಮಗ ಇರುತ್ತಾನೆಂದರೆ ಸಾಕ್ಷಿಯು ಅವರೇ ಬೇರೆ ಇವರೇ ಬೇರೆ ಎಂದು

ನುಡಿಯುತ್ತಾರೆ. ಮಹಾದೇವಪ್ಪ ನಮ್ಮ ಊರಿನಲ್ಲಿ ಇದ್ದು ಶಾಲೆ ಕಲಿತ್ತಿರುತ್ತಾನೆಂದರೆ ಸರಿಯಲ್ಲ. ಸದರಿ ವಿಚಾರ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

3.ಗುರುಪಾದಪ್ಪ ಬದುಕಿದ್ದಾಗ ಸಾವತ್ರವ್ವ ಮತ್ತು ಮಹಾದೇವಪ್ಪ ಅವರನ್ನು ಜೋಪಾನ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಂಬಂಧದಲ್ಲಿ ಪ್ರತಿವಾದಿ ನಂ. 1 ಗುರುಪಾದಪ್ಪನ ಮೊಮ್ಮಗನಾಗಬೇಕು ಎಂದರೆ ಸರಿಯಲ್ಲ.

3.ಸೊರಬ್ಬಪ್ಪನಿಗೆ ಶಿವಪ್ಪ ಮತ್ತು ಸಿದ್ರಾಮಪ್ಪ ಎಂಬ ಮಕ್ಕಳು ಇರುತ್ತಾರೆ. ಅವರಿಗೆ ಯಾವುದೇ ಹೆಣ್ಣು ಮಕ್ಕಳು ಇರುವುದಿಲ್ಲ. ನಿಪಿ-40 ರಲ್ಲಿ ಸೊರಬ್ಬನಿಗೆ ಪುಟ್ಟವ್ವ ಎಂಬ ಮಗಳು ಇರುತ್ತಾಳೆಂದು ತೋರಿಸಲಾಗಿದೆ ಎಂದರೆ ಸರಿಯಲ್ಲ. ಮಲ್ಲಪ್ಪ ಪುಟ್ಟವ್ವನ ಗಂಡ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೊತ್ತಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪುಟ್ಟವ್ವನಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ನನಗೆ ಗೊತ್ತಿರುವುದಿಲ್ಲ. ಪುಟ್ಟವ್ವ 1985 ರಲ್ಲಿ ಮೃತಪಟ್ಟಿರುತ್ತಾರೆಂದು ದಾಖಲೆ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ಪುಟ್ಟವ್ವ ವಂಶಸ್ಥರನ್ನು ಸಹ ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

4.ಶಿವಪ್ಪ 1994 ರಲ್ಲಿ ಮೃತಪಟ್ಟಿರುತ್ತಾರೆ. 1977 ರಲ್ಲಿ ಶಿವಪ್ಪ ಮೃತಪಟ್ಟಿರುತ್ತಾರೆಂದರೆ ಸರಿಯಲ್ಲ. ಶಿವಪ್ಪ 1994 ರಲ್ಲಿ ಮೃತಪಟ್ಟಿರುತ್ತಾರೆಂದರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ ನನಗೆ ಸರಿಯಾದ ದಿನಾಂಕ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಶಿವಪ್ಪನ ಮಕ್ಕಳು ಹೆಸರು ಪಾರ್ವತವ್ವ , ಬಸವ್ವ , ಮಲ್ಲವ್ವ ಕಸ್ತೂರೆವ್ವ, ಬೀರವ್ವ, ನಿಂಗಪ್ಪ , ರುದ್ರಪ್ಪ , ಮಲ್ಲೇಶಪ್ಪ ಆಗಿರುತ್ತದೆ. ಸದರಿ 05 ಜನ ಹೆಣ್ಣು ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ . ಶಿವಪ್ಪನ ಹೆಂಡತಿಯ ಹೆಸರು ಅಡಿವೆಮ್ಮ ಆಗಿರುತ್ತದೆ , ಅವರು 1992 ರಲ್ಲಿ ಮೃತಪಟ್ಟಿರುತ್ತಾರೆ. ಅವರ 1972 ಮೃತಪಟ್ಟಿರುತ್ತಾರೆಂದ ಸಾಕ್ಷಿಯು ಇಸವಿ ಸರಿಯಾಗಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ದಾವಾ ಆಸ್ತಿ ಮತ್ತು ದಾವಾದ ಬಗ್ಗೆ ಸಂಪೂರ್ಣ ಮಾಹಿತಿ

ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗೂ ಮತ್ತು ನನಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

Sd/-08.07.25

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ Sd/-

ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ